(c) whether the authorities of the said factory have secured any additional lands from the Government ?

A.—Sri M. V. KRISHNAPPA (Minister for Revenue).—

(a) 1965.

(b) No.

(c) Yes.

ಶ್ರೀ ವೀರಭದ್ರಪ್ಪ ಈರಪ್ಪ.—ಸ್ವಾಮಿ ಸಾಲಾರ್‌ಜಂಗ್ ಸಕ್ಕರೆ ಕಾರ್ಖಾನೆಯವರು ಸರ್ಕಾರದಿಂದ ಎಷ್ಟು ಜಮೀನನ್ನು ಯಾವಾಗ ತೆಗೆದುಕೊಂಡಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಾಲಾರ್‌ಜಂಗ್ ಸಕ್ಕರೆ ಕಾರ್ಖಾನೆಯು ಸ್ವಾಧೀನದಲ್ಲಿ 1675 ಎಕರೆ 7 ಗುಂಟೆ ಜಮೀನು ಇದೆ. 1955ನೇ ಇಸವಿಯಿಂದ, ಆ ಫ್ಯಾಕ್ಟರಿಯು ಸ್ಥಾಪನೆ ಆದಾಗಿನಿಂದಲೂ ಕೂಡ ಅವರು ಒಳ್ಳೆಯ ಜಮೀನನ್ನು ಉತ್ತುಕೊಂಡು ಬಂದಿದ್ದರು. ಆ ಬಗ್ಗೆ ರೈತರಿಗೂ ಅಪರಗೂ ಜಗಳ ಇತ್ತು ಅದನ್ನು ಸರ್ಕಾರದವರು ಪರಿಹಾರ ಮಾಡಿ ಈಗ ಅಷ್ಟು ಭೂಮಿಯನ್ನು ಅವರಿಗೆ ಕೊಟ್ಟಿದೆ.

ಶ್ರೀ ವೀರಭದ್ರಪ್ಪ ಈರಪ್ಪ.—ಆ ಕಾರ್ಖಾನೆಯವರು ಆ ಜಮೀನನ್ನು ಸ್ವಂತವಾಗಿ ಮಾಡಿಸುತ್ತಾರೆಯೋ ಅಥವಾ ರೈತರಿಗೆ ಗೇಣಿಗೆ ಕೊಡುತ್ತಾರೊ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರೇ ಸ್ವಂತವಾಗಿಯೂ ಸ್ವಲ್ಪ ಮಾಡುತ್ತಾರೆ. ರೈತರೂ ಮಾಡುತ್ತಿದ್ದಾರೆ.

ಶ್ರೀ ವೀರಭದ್ರಪ್ಪ ಈರಪ್ಪ.—ಆ ರೈತರು ಗೇಣಿದಾರರು ಎಂದು ತಿಳಿದುಕೊಂಡು ಅವರಿಗೆ ಕೊಂದರೆ ಕೊಡದಂತೆ ಸರ್ಕಾರದವರು ನೋಡಿಕೊಳ್ಳುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಗೇಣಿ ಶಾಸನ ಇದೆ. ಅದರ ಪ್ರಕಾರ ರೈತರಿಗೆ ಇರುವ ಹಕ್ಕನ್ನು ಅವರು ಕೋರ್ಟಿಗೆ ಹೋಗಿ ಪಡೆಯಬಹುದು.

ಶ್ರೀ ವೀರಭದ್ರಪ್ಪ ಈರಪ್ಪ.—ಆ ಫ್ಯಾಕ್ಟರಿಯವರು ಹೆಚ್ಚಿಗೆ ಭೂಮಿಯನ್ನೇನಾದರೂ ವಶಪಡಿಸಿಕೊಂಡಿದ್ದಾರೆಂದು ಸರ್ಕಾರ ಪರಿಶೀಲನೆ ಮಾಡಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಬಹಳ ಜಮೀನನ್ನು ಸ್ವಾಧೀನ ಮಾಡಿಕೊಂಡಿದ್ದರು. 3,800 ಎಕರೆ ಜಮೀನು ನಮ್ಮದು ಎಂದು ಹೇಳುತ್ತಾರೆ. ಆದರೆ ಹೈದರಾಬಾದ್ ನವಾಬರು ಆ ಫ್ಯಾಕ್ಟರಿಗೆ ಜಮೀನು ಕೊಟ್ಟಿರುವ ಆರ್ಡರಿನಲ್ಲಿ 1,200 ಎಕರೆ ಮಾತ್ರ ಕೊಟ್ಟಿದ್ದೇವೆ ಎಂದು ತೋರಿಸಿದೆ. ರೆವಿನ್ಯೂ ಆಫೀಸರು ಮತ್ತು ಫ್ಯಾಕ್ಟರಿಯವರೂ ಕುಳಿತುಕೊಂಡು ಎಲ್ಲಾ ರೆಕ್ಕಾಚಾರ ಮಾಡಿದ್ದಾರೆ. 1675 ಎಕರೆ ಜಮೀನು ಮಾತ್ರ ಅವರ ಸ್ವಾಧೀನದಲ್ಲಿದೆ.

———

Community Centre Building at Jorapurpet in Bijapur.

*Q.—498. Sri J. L. KABADI (Baradol).—

Will the Government be pleased to state :—

(a) the action taken by the Director of Social Welfare on the instruction given by the Government to release necessary funds out of the Reserve amount with him under "Community Centre" for Scheduled Caste during 1965—66, to complete the community centre building at Jorapurpet in Bijapur. *Vide* Government letter No. PHS 65 SEA 65, dated 16th July 1965 ;

(b) how much amount is required for completion of the said building ?

A.—**Sri S. NIJALINGAPPA** (Chief Minister).—

(*a*) A report was submitted to Government.

(*b*) Rs. 2,984—00.

ಶ್ರೀ ಜೆ. ಎಲ್. ಕಬಾಡಿ.—ಬಿಜಾಪುರದ ಜೋರಾಪುರ ಪೇಟೆಯಲ್ಲಿರುವ ಕಮ್ಯುನಿಟಿ ಸೆಂಟರ್ ಕಟ್ಟಡಕ್ಕಾಗಿ ಸಾಮುದಾಯಿಕ ಕೇಂದ್ರ ಬಾಬಿಗೆ ಮೀಸರಾಗಿರುವ ಹಣವನ್ನು ಖರ್ಚು ಮಾಡಿ ಆ ಕಟ್ಟಡವನ್ನು ಪೂರ್ತಿ ಮಾಡಬೇಕೆಂದು ಸರ್ಕಾರದವರು ಸಮಾಜ ಕಲ್ಯಾಣ ಇಲಾಖೆಯ ಡೈರೆಕ್ಟರವರಿಗೆ ಆದೇಶವನ್ನು ಕೊಟ್ಟಿದ್ದಾರೆಯೇ ? ಆ ಪ್ರಕಾರ ಅವರು ಕ್ರಮ ತೆಗೆದುಕೊಂಡಿದ್ದಾರೆಯೇ ? ಸರ್ಕಾರದ ಪತ್ರಕ್ಕೆ ಅವರು ಮಾನ್ಯತೆ ಕೊಟ್ಟರೋ ಅಥವಾ ಇಲ್ಲವೋ ?

ಶ್ರೀ ಎಸ್. ನಿಜಲಿಂಗಪ್ಪ.—ಸರ್ಕಾರದ ಪತ್ರ ಏನೂ ಇಲ್ಲ. ಅದು ಏನಾಗಿದೆ ಎಂದರೆ ಆ ಕಟ್ಟಡಕ್ಕೆ ಎಷ್ಟು ಹಣವನ್ನು ಖರ್ಚುಮಾಡಬೇಕಾಗಿತ್ತೋ ಅಷ್ಟು ಹಣವನ್ನು ಖರ್ಚು ಮಾಡಿ ಇನ್ನೂ ವಿಶೇಷವಾಗಿ ಹೆಚ್ಚಿಗೆ ಹಣವನ್ನು ಅದಕ್ಕೆ ಖರ್ಚುಮಾಡಿದ್ದಾರೆ. ಜನಗಳು ಮತ್ತು ಮಾನ್ಯ ಸದಸ್ಯರು ಆ ಕಟ್ಟಡಕ್ಕೆ ಎಷ್ಟು ಹಣವನ್ನು ಖರ್ಚುಮಾಡಬೇಕಾಗಿತ್ತೋ ಅಷ್ಟು ಹಣವನ್ನು ಖರ್ಚುಮಾಡುವುದನ್ನು ಬಿಟ್ಟು ಅದಕ್ಕೆ 10 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಆದ್ದರಿಂದ ಈಗ ಸರ್ಕಾರ ಜಾಸ್ತಿ ದುಡ್ಡನ್ನು ಕೊಡಬೇಕಾಗಿ ಬಂದಿದೆ. ಅದು ಸರ್ಕಾರದ ತಪ್ಪು ಇಲ್ಲ. ಅಧಿಕಾರಿಗಳದೂ ತಪ್ಪು ಇಲ್ಲ.

ಶ್ರೀ ಜೆ. ಎಲ್. ಕಬಾಡಿ.—ಈಗ ಆ ಕಟ್ಟಡಕ್ಕೆ ಸರ್ಕಾರದವರು 4,600 ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ವರ್ಷ ಜನಗಳು ಆ ಕಟ್ಟಡಕ್ಕೆ 5-6 ಸಾವಿರ ರೂಪಾಯಿಗಳನ್ನು ಕಾಂಟ್ರಿಬ್ಯೂಟ್ ಮಾಡಿ ಕಟ್ಟಡವನ್ನು ಕಟ್ಟಿಸಿದರು. ಅದು ಇನ್ನೂ ಪೂರ್ತಿ ಆಗಿಲ್ಲ. ಅದಕ್ಕಾಗಿ ಜನಗಳು ಆ ಕಟ್ಟಡವನ್ನು ಪೂರ್ತಿ ಮಾಡುವುದಕ್ಕಾಗಿ ಇನ್ನು ಸ್ವಲ್ಪ ದುಡ್ಡನ್ನು ಕೊಡಬೇಕೆಂದು ಸರ್ಕಾರದವರನ್ನು ಕೇಳಿದ್ದರ ಮೇಲೆ, ಸರ್ಕಾರದವರು ಹಣ ಕೊಡಬಹುದು ಎಂದು ಹುಕುಂ ಕೊರಡಿಸಿದರು. ಆದರೆ ಹಣ ಕೊಡುವ ಬಗ್ಗೆ ಸೋಷಿಯರ್ ವೆರ್‌ಫೇರ್ ಇಲಾಖೆಯ ಡೈರೆಕ್ಟರವರು ಕ್ರಮವನ್ನ ಕೈಗೊಳ್ಳಲಿಲ್ಲ. ಆ ಕಟ್ಟಡ ಮುಗಿಯುವುದು ಹೇಗೆ ? ಇದರ ಬಗ್ಗೆ ಸರ್ಕಾರದವರು ಏನು ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಆ ಬಗ್ಗೆ ಸೋಷಿಯರ್ ವೆರ್‌ಫೇರ್ ಇಲಾಖೆಯ ಡೈರೆಕ್ಟರಿಗೆ ಬರೆದಿದ್ದೇವೆ. ನಾನು ಮಾನ್ಯ ಸದಸ್ಯರಿಗೆ ಹೇಳುವುದು ಇಷ್ಟೆ. ಮೊದಲು ಆ ಕಟ್ಟಡಕ್ಕೆ 2,800 ರೂಪಾಯಿಗಳು ಮಂಜೂರಾಗಿತ್ತು. ಆಮೇಲೆ ಪುನಃ 1,400 ರೂಪಾಯಿಗಳು ಮಂಜೂರಾಯಿತು. ನಂತರ 4,600 ರೂಪಾಯಿಗಳನ್ನು ಮಂಜೂರು ಮಾಡಲಾಯಿತು. ಅದಕ್ಕೆ ಜನಗಳೂ ಸಹ ಸ್ವತಂತ್ರವಾಗಿ ಹಣವನ್ನು ಖರ್ಚುಮಾಡಿದ್ದಾರೆ, ಸಂತೋಷ. ಸರ್ಕಾರದವರು ಆ ಕಟ್ಟಡಕ್ಕೆ ಈಗಾಗಲೇ 7-8 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈಗ ಮತ್ತೆ ಅದಕ್ಕೆ ಹಣವನ್ನು ಕೊಡಿ ಎಂದು ಬಂದಿದ್ದಾರೆ. ಅದಕ್ಕಾಗಿ ಡೆಪ್ಯುಟಿ ಕಮಿಷನರಿಗೆ ಬರೆದಿದೆ. ಮಾನ್ಯ ಸದಸ್ಯರಿಗೂ ಮತ್ತು ನಮ್ಮ ಸ್ನೇಹಿತರಿಗೂ ನಾವು ಒಂದು ಎಚ್ಚರಿಕೆಯನ್ನು ಕೊಡುವ ತೀರ್ಮಾನವನ್ನು ಮಾಡಬೇಕಾಗುತ್ತದೆ. ಏತಕ್ಕೆಂದರೆ, ಅವರು ಈ ರೀತಿ ಸ್ವತಂತ್ರವಾಗಿ ಹಣವನ್ನು ಖರ್ಚುಮಾಡತಕ್ಕದ್ದು ಸರಿಯಲ್ಲ. ಅವರು ಹಾಗೆ ಮಾಡುವುದಾದರೆ ಸರ್ಕಾರದಿಂದ ನಿರೀಕ್ಷಿಸಿದಷ್ಟು ಹೆಚ್ಚು ಹಣ ಸಿಕ್ಕುವುದು ಕಷ್ಟವಾಗುತ್ತದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಜೆ. ಎಲ್. ಕಬಾಡಿ.—ಈಗ ಆ ಕಟ್ಟಡವನ್ನು ಪೂರ್ತಿಮಾಡಿ ಮುಗಿಸುವುದಕ್ಕೆ ಆಗುವಷ್ಟಾದರೂ ಹಣವನ್ನು ಕೊಟ್ಟರೆ ಸಾಕಾಗುತ್ತದೆ. ಆದ್ದರಿಂದ ತಾವು ಆ ರೀತಿ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನವನ್ನು ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಕಟ್ಟಡ ಮುಗಿದಿಲ್ಲ ಎಂದು ಸುಮ್ಮನೆ ದುಡ್ಡು ಕೊಟ್ಟುಕೊಂಡು ಹೋದರೆ ಕಷ್ಟವಾಗುತ್ತದೆ. ಈಗ ಪುನಃ ಅದಕ್ಕೆ ಎಷ್ಟು ಹಣ ಕೊಡಬೇಕೆಂಬುದನ್ನು ವಿಚಾರ ಮಾಡುತ್ತೇವೆ. ಹರಿಜನರು ಹಿಂದುಳಿದ ಜನಾಂಗದವರು ಎಂದು ಸರ್ಕಾರದವರು ಅದನ್ನು ಹೆಚ್ಚು ಸಹಾನುಭೂತಿಯಿಂದ ಆಲೋಚನೆ ಮಾಡುತ್ತಾರೆ ಎಂದು ಮಾತ್ರ ನಾನು ಹೇಳುತ್ತೇನೆ.